ಅಧ್ಯಕ್ಷರು ; ಬಂಗೇರರವರೆ, ಇದನ್ನು ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ. ಐದು ನಿಮಿಷ ಅವಕಾಶ ಕೊಟ್ಟರೆ. ಉತ್ತರದ ಪ್ರತಿಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಬಿ.ರಮಾನಾಥ ರೈ ; ಅಧ್ಯಕ್ಷರೆ. ಇದು ಒಂದು ಮಹತ್ವವಾದ Calling Attention. ನಮ್ಮ ಜಿಲ್ಲೆಯ ಪರಿಸ್ಥಿತಿ ಬಹಳ ಗಂಭೀರವಾಗಿದೆ.

ಅಧ್ಯಕ್ಷರು ; ಇದು ಸರಿಯಿಲ್ಲ. ಈ ರೀತಿ ಮೊದಲನೇ ಸಲ ಆಗಿದೆ. ಇದನ್ನು ಸೋಮವಾರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಇದು ಸರಿಯಲ್ಲವೆಂದು ನಾನೂ ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : Calling Attentionಗಳಿಗೂ ನೀವು ಉತ್ತರದ ಪ್ರತಿಗಳನ್ನು ಒದಗಿಸಿಕೊಡುವುದಿಲ್ಲವೆಂದರೆ. it shows your....

ಒಬ್ಬ ಮಾನ್ಯ ಸದಸ್ಯರು : ಇಲ್ಲಿದ್ದವರೆನ್ನೆಲ್ಲಾ ನಾವು ಛೀಮಾರಿ ಹಾಕಬೇಕು.

ಅಧ್ಯಕ್ಷರು ; ಛೀಮಾರಿ ಹಾಕುವಂಥಾದ್ದು ಏನೂ ಅಲ್ಲ. ಈಗ ನಾನು ಅವರಿಗೆ ನಿರ್ದೇಶನ ನೀಡಿದ್ದೇನೆ. ಇದನ್ನು ಸೋಮವಾರ ತೆಗೆದುಕೊಳ್ಳೋಣ.

ವಿಷಯ ; ಬೆಳಗಾವಿ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ಬಿಡುಗಡೆ ಮಾಡಿದ್ದ ಅನುದಾನವನ್ನು ಗದಗ ಜಿಲ್ಲೆಗೆ ವರ್ಗಾಯಿಸುತ್ತಿರುವುದರಿಂದ ಉಂಟಾಗುತ್ತಿರುವ ತೊಂದರೆಗಳು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ(ಚಿಕ್ಕೋಡಿ–ಸದಲಗಾ) ; ಮಾನ್ಯ ಅಧ್ಯಕ್ಷರೆ. ಬೆಳಗಾವಿ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ಬಿಡುಗಡೆ ಮಾಡಿದ್ದ ಅನುದಾನವನ್ನು ಗದಗ ಜಿಲ್ಲೆಗೆ ವರ್ಗಾಯಿಸುತ್ತಿರುವುದರಿಂದ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನಕ್ಕೆ ಸೆಳೆಯುತ್ತಿದ್ದೇನೆ.

ಶ್ರೀ ಕೆ. ಕರುಣಾಕರ ರೆಡ್ಡಿ(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ. 2005ನೇ ಸಾಲಿನಲ್ಲಿ ಪ್ರವಾಹಪೀಡಿತವಾಗಿರುವ ಬೆಳಗಾಂ ಜಿಲ್ಲೆಯ 36 ಹಳ್ಳಗಳನ್ನು ಸ್ಥಳಾಂತರಿಸಲು 1570.17 ಲಕ್ಷ ರೂ.ಗಳನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 140 ಟಿಎನ್ಆರ್ 2008 ದಿ:25–8–2006ರಲ್ಲಿ ಬಿಡುಗಡೆ ಮಾಡಲಾಗಿತ್ತು. ಇದುವರೆಗೆ

ಬೆಳಗಾಂ ಜಿಲ್ಲಾಧಿಕಾರಿಗಳು 699.26 ಲಕ್ಷ ರೂಪಾಯಿ ವೆಚ್ಚ ಮಾಡಿ ರೂ.870.91 ಲಕ್ಷ ರೂಪಾಯಿ ಉಳಿಕೆ ಇರುತ್ತದೆಂದು ಹಾಗೂ ಭೂಸ್ವಾಧೀನ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತವೆಂದು ದಿನಾಂಕ:28–3–2008ರಂದು ಪತ್ರದಲ್ಲಿ ವರದಿ ಮಾಡಿದ್ದರು. ದಿನಾಂಕ:10–4–2008ರಂದು ಮಾನ್ಯ ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಾದೇಶಿಕ ಆಯುಕ್ತರು. ಬೆಳಗಾಂ ವಿಭಾಗ. ಬೆಳಗಾಂ ಇವರು ಈ ಉಳಿಕೆ ಹಣವನ್ನು ಹಿಂಪಡೆದು ಪ್ರವಾಹಪೀಡಿತವಾಗಿರುವ ಗದಗ ಹಾಗೂ ಧಾರವಾಡ ಜಿಲ್ಲೆಗಳಲ್ಲಿನ ಹಳ್ಳಿಗಳನ್ನು ಸ್ಥಳಾಂತರಿಸಲು ಹಿಂಪಡೆಯಬಹುದೆಂದು ತಿಳಿಸಿರುತ್ತಾರೆ. ಅದರಂತೆ. ಬೆಳಗಾಂ ಜಿಲ್ಲೆಯ ಜಿಲ್ಲಾಧಿಕಾರಿಗಳ ಸಿ.ಆರ್.ಎಫ್.ಪಿ.ಡಿ. ಖಾತೆಯಿಂದ 800.00 ಲಕ್ಷ ರೂ.ಗಳನ್ನು ಹಿಂಪಡೆದು ಧಾರವಾಡ ಜಿಲ್ಲೆಯಲ್ಲಿ ಪ್ರವಾಹದಿಂದ ಪೀಡಿತವಾಗಿರುವ ಅರಹಟ್ಟಿ ಮತ್ತು ಕೊಂಗವಾಡ ಗ್ರಾಮಗಳನ್ನು ಸ್ಥಳಾಂತರಿಸಲು 189.50 ಲಕ್ಷ ರೂ.ಗಳನ್ನು ಹಾಗೂ ಗದಗ ಜಿಲ್ಲೆಯಲ್ಲಿ ಪ್ರವಾಹಪೀಡಿತವಾಗಿರುವ ಹೊಳೆಮಣ್ಣೂರು ಮತ್ತು ಕುರ್ಲಗೇರಿ ಗ್ರಾಮಗಳನ್ನು ಸ್ಥಳಾಂತರಿಸಲು 610.50 ಲಕ್ಷ ರೂ.ಗಳನ್ನು ಧಾರವಾಡ ಹಾಗೂ ಗದಗ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ವರ್ಗಾವಣೆ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಕಂಇ 1 ಟಿಎಸ್‌ವೈ 2008(ಭಾಗ) ದಿ:24–8–2008ರಲ್ಲಿ ಆದೇಶ ಹೊರಡಿಸಲಾಗಿದೆ. ಪ್ರವಾಹಪೀಡಿತ ಗ್ರಾಮಗಳನ್ನು ಸ್ಥಳಾಂತರಿಸಲು ಭೂಸ್ವಾಧೀನಕ್ಕಾಗಿ ಬೆಳಗಾವಿ ಅಧಿಕಾರಿಗಳ ಕೋರಿಕೆ ಬಂದಾಗ ಹಣ ಬಿಡುಗಡೆ ಮಾಡಲಾಗುವುದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ. ಇನ್ನು ಹಣ ಬಿಡುಗಡೆಯಾಗಿಲ್ಲ ಸಿಆರ್‌ಎಫ್ ಫಂಡ್‌ನಲ್ಲಿ 15 ಕೋಟಿ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ. ಅದರಲ್ಲಿ 7 ಕೋಟಿ ರೂಪಾಯಿಗಳನ್ನು ಭೂಸ್ವಾಧೀನ ಮತ್ತು ಸ್ಥಳಾಂತರಿಸುವ ಸಲುವಾಗಿ ಜಿಲ್ಲಾಧಿಕಾರಿಗಳು ಖರ್ಚು ಮಾಡಿದ್ದಾರೆ. ಆ ಹಣವನ್ನು ಒಮ್ಮೆಲೇ ಖರ್ಚು ಮಾಡಲಾಗುವುದಿಲ್ಲ. ಹಂತ ಹಂತವಾಗಿ ಖರ್ಚು ಮಾಡಬೇಕಾಗುತ್ತದೆ. ಈಗಾಗಲೇ ಭೂ ಸ್ವಾಧೀನ ಕಾರ್ಯ ಆರಂಭವಾಗಿದ್ದು ಆ ಮಾಲೀಕರಿಗೆ ಹಣವನ್ನು ಕೊಡಬೇಕಾಗಿದೆ. ದಯವಿಟ್ಟು ನೀವು ಬೇಕಾದರೆ. ಧಾರವಾಡ, ಗದಗ್ ಜಿಲ್ಲೆಗಳಿಗೆ ಸರ್ಕಾರದಿಂದ ಹಣ ಕೊಡಿ. ಅದನ್ನು ಬಿಟ್ಟು ಸಿಆರ್ ಎಫ್ ನಲ್ಲಿ ಕೊಟ್ಟ ಹಣವನ್ನು ವಾಪಾಸ್ ತೆಗೆದುಕೊಂಡು. ನೀವೇ ಮುಖ್ಯಮಂತ್ರಿಗಳು ಅಥಣಿ. ಚಿಕ್ಕೋಡಿಗೆ ಬಂದಾಗ ಸ್ಥಳಾಂತರಿಸುವುದಕ್ಕೆ ನಾವು ಬೇಕಾದಷ್ಟು ಹಣವನ್ನು ಕೊಡುತ್ತೇವೆ. ಅದಕ್ಕೆ ನಾವು ರೆಡಿ ಇದ್ದೇವೆಂದು ಹೇಳಿದಾಗ. ಮತ್ತೆ ಆ ಹಣವನ್ನು ತೆಗೆದುಕೊಂಡು ಅಲ್ಲಿ ಅನಾನುಕೂಲ ಮಾಡಿಕೊಡುವುದಕ್ಕಿಂತ. ದಯವಿಟ್ಟು ಆ ಹಣವನ್ನು ಆ ಬೆಳಗಾಂನಲ್ಲೇ ಉಳಿಸಿ

ಸ್ಥಳಾಂತರಿಸುವುದಕ್ಕೆ ರೈತರಿಗೆ ಅನುಕೂಲ ಮಾಡಿಕೊಡಬೇಕು. ಹೊಸ ಸರ್ಕಾರದಿಂದ ಧಾರವಾಡ ಮತ್ತು ಗದಗ್ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಬೇಕೆಂದು ನಿಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇಲ್ಲದಿದ್ದರೆ ಈ ಕ್ರಿಯೆ ನಿಂತು ಹೋಗುತ್ತಿದೆ. ಮತ್ತು ಈಗಾಗಲೇ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಈ ಹಣವನ್ನು ವಾಪಾಸ್ ತೆಗೆದುಕೊಳ್ಳಬೇಡಿ. ನಾವು ಕ್ರಿಯೆಯನ್ನು ಮುಂದುವರೆಸಿದ್ದೇವೆ. ಈಗಾಗಲೇ ಹಣ ಕೊಡುತ್ತೇವೆಂದು ರೈತರಿಗೆ ಭರವಸೆಯನ್ನು ಕೊಟ್ಟಿದ್ದೇವೆ. ಇಷ್ಟೆಲ್ಲಾ ಇದ್ದಾಗ ರಾಮದುರ್ಗಾ ತಾಲ್ಲೂಕಿಗೆ. ಹುಕ್ಕೇರಿ ತಾಲ್ಲೂಕಿಗೆ ಅನಾನುಕೂಲವಾಗುತ್ತದೆ. ಇವತ್ತು ಪ್ರವಾಹದಿಂದ ರೈತರು ಸಾಕಷ್ಟು ನೊಂದಿದ್ದಾರೆ. ಅವರನ್ನು ಅಲ್ಲಿಂದ ಸ್ಥಳಾಂತರಿಸುವುದು ಬಹಳ ಅವಶ್ಯಕತೆ ಇದೆ. ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ. ದಯವಿಟ್ಟು ಆ ಹಣವನ್ನು ಪಿಡಿ ಅಕೌಂಟ್ ನಿಂದ ತೆಗೆಯಬೇಡಿ. ಇನ್ನು ಹಣವನ್ನು ತೆಗೆದಿಲ್ಲ. ಬೆಳಗಾಂ ಜಿಲ್ಲೆಯಲ್ಲೇ ಇದೆ. ಅದಕ್ಕೆ ಜಿಲ್ಲಾಧಿಕಾರಿಗಳು ಒಪ್ಪುತ್ತಿಲ್ಲ. ನೀವು ಸರ್ಕಾರದ ಆಜ್ಞೆ ಏನಿದೆ. ಅದನ್ನು ತಡೆಹಿಡಿಯಬೇಕು. ಮತ್ತೆ ಬೇರೆ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : 2006 ರಲ್ಲಿ ಆದ ಪ್ರವಾಹದಿಂದ ಈ ತೊಂದರೆಯಾಗಿ. ಇವತ್ತು ಈ ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ. ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ ಭೂಸ್ವಾಧೀನ ಕಾರ್ಯ ವಿಳಂಬವಾಗಿದ್ದು ನಿಜ. ಏಕೆಂದರೆ. ಅಲ್ಲಿ ಕರಿಭೂಮಿ ಇರುವುದರಿಂದ. ಸೈಟುಗಳು ಚೇಂಜ್ ಆಗಿ ತೊಂದರೆಯಾಗಿ ಇವತ್ತು ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ. ಈಗಾಗಲೇ ಇದನ್ನು ಸ್ಥಳಾಂತರಿಸುವಲ್ಲಿ ಅಧಿಕಾರಿಗಳು ಬಹಳ ಜಾಗ್ರತೆಯಿಂದ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಇಂಥ ಸಂದರ್ಭದಲ್ಲಿ ತಾವು ಹಣವನ್ನು ವಾಪಾಸ್ ಪಡೆಯುವುದನ್ನು ತಡೆಹಿಡಿಯಬೇಕು ಮತ್ತು ಇದರ ಸಲುವಾಗಿ ಜಿಲ್ಲಾಧಿಕಾರಿಗಳು ಹೆಚ್ಚಾಗಿ 10 ಕೋಟಿ ರೂಪಾಯಿಗಳನ್ನು ಸಹ ಕೇಳಿದ್ದಾರೆ. ಇರುವಂಥ ಹಣವನ್ನು ಅಲ್ಲೇ ಪರಿಹಾರ ಕೊಡುವುದಕ್ಕೆ ತಾವು ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, 2005–06ನೇ ಇಸವಿಯಲ್ಲಿ ಪ್ರವಾಹ ಬಂದಾಗ 36 ಹಳ್ಳಿಗಳಿಗೆ ಸಿಆರ್ ಎಫ್ ಫಂಡ್ ನಿಂದ ಹಣ ಬಿಡುಗಡೆ ಮಾಡಿ ಸ್ಥಳಾಂತರಿಸಬೇಕೆಂದಾಯಿತು. ಈಗಾಗಲೇ 3 ವರ್ಷಗಳಿಂದ ನಾವು 15 ಕೋಟಿ ಕೊಟ್ಟಿದ್ದೂ ಜಿಲ್ಲಾಧಿಕಾರಿಗಳು ಅದನ್ನು ಖರ್ಚು ಮಾಡಲಿಲ್ಲ. ಸ್ವಲ್ಪ ಖರ್ಚು ಮಾಡಿದರು. ಇನ್ನು 7 ಕೋಟಿ ಖರ್ಚು ಮಾಡಿಲ್ಲವೆಂದು ಬೇರೆ ಕಡೆ ಪ್ರವಾಹ

ಬಂದ ಕಡೆಗೆ ತೆಗೆದುಕೊಂಡಿದ್ದೇವೆಂದು ಹೇಳುತ್ತಾರಲ್ಲ. ಅದನ್ನು ಭೂ ಸ್ವಾಧೀನ ಪ್ರಕ್ರಿಯೆಗೆ 3 ವರ್ಷಗಳು ಬೇಕೆ? ಸ್ವಾಧೀನಪಡಿಸಿಕೊಳ್ಳುವುದು ಯಾವ ಹಂತದಲ್ಲಿದೆ. ಇಂತಹ ಕಡೆ ಪ್ರವಾಹ ಪದೇ ಪದೇ ಪ್ರತಿ ವರ್ಷ ಬರುತ್ತದೆ. ಹಳ್ಳಿಯಲ್ಲಿರುವ ರೈತರು ತೊಂದರೆಗೆ ಒಳಗಾಗುತ್ತಾರೆ. ಮನೆಗಳು ಬಿದ್ದು ಹೋಗುತ್ತವೆ. ಮನೆಗಳು ಮುಳುಗಿ ಹೋಗುತ್ತವೆ. ಎಲ್ಲಾ ದಿವಸಗಳು ಬೇಕು? Land Acquisition Act. Section–4 & 6 ಕೆಳಗೆ ಇದನ್ನು ಮಾಡುವುದಕ್ಕೆ ಎಷ್ಟು ದಿವಸ ಬೇಕು? Without notification Section–4 ಮಾಡದೇ ಇಂಥ ಎಮರ್ಜೆನ್ಸಿ ಕೇಸ್‌ಗಳಿವೆ. ನೀವು ರೆವಿನ್ಯೂ ಮಿನಿಸ್ಟರ್ ಇದ್ದೀರಿ ಆ ಕಾಲದಲ್ಲಿ ಇಲ್ಲೆಲ್ಲಾ ಚರ್ಚೆಯಾಯಿತು. ಇವತ್ತಿನವರೆಗೆ ಅಲ್ಲಿ ಯಾವ ಪರಿಸ್ಥಿತಿ ಇದೆ. ಅವರು ಹಣವನ್ನು ಏತಕ್ಕೆ ಖರ್ಚು ಮಾಡಲಿಲ್ಲ. ಸರ್ಕಾರ ಆ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ. ಏಕೆ delay ಆಗಿದೆ. ಅದು ಯಾವ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ಮಾನ್ಯಮಂತ್ರಿಗಳು ಸ್ವಲ್ಪ ಹೇಳಬೇಕು.

ಶ್ರೀ ಕರುಣಾಕರ ರೆಡ್ಡಿ ; ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ಆ ಹಣವನ್ನು ವಾಪಾಸ್ ಪಡೆದು ಬೇರೆ ಜಿಲ್ಲೆಗೆ ಕೊಟ್ಟಿದ್ದೇವೆ. ಅದನ್ನು ತಕ್ಷಣ ಬೆಳಗಾಂ ಜಿಲ್ಲೆಗೆ ಕೊಡಬೇಕೆಂದು ಹೇಳಿದ್ದಾರೆ. ಸರ್ಕಾರ ಅದಕ್ಕೆ ಬದ್ದವಾಗಿದೆ. ಇವತ್ತು ಜಿಲ್ಲಾಧಿಕಾರಿಗಳಿಂದ ಸ್ಥಳಾಂತರವಾಗುವ ಕೆಲಸ ಆಗಿ ಕೇವಲ 68 ಎಕರೆ 10 ಗುಂಟೆ ಮಾತ್ರ acquire ಆಗಿದೆ. ಇನ್ನು ಸುಮಾರು 360 ಎಕರೆ 13 ಗುಂಟೆ ಜಮೀನನ್ನು ಗುರುತಿಸಲಾಗಿದೆ. ಆದರೆ ಅಲ್ಲಿನ ರೈತರು ಹೆಚ್ಚಿನ compensation ಬೇಕೆಂದು ಹೊಂದಾಣಿಕೆಯಾಗದೆ ಅನೇಕ ಬಾರಿ ಅಧಿಕಾರಿಗಳು ಅವರೊಡನೆ ಚರ್ಚೆ ಮಾಡಿದ್ದಾರೆ. ಸನ್ಮಾನ್ಯ ಸದಸ್ಯರು ಕೂಡ ಸ್ವಲ್ಪ ಸಹಕಾರವನ್ನು ಕೊಟ್ಟರೆ ಖಂಡಿತಾ ಅದನ್ನು ಬೇಗ ಮುಗಿಸಿ. ಯಾವುದೇ ದಿನ ನಾವು ತಡ ಮಾಡುವುದಿಲ್ಲ. ಇವತ್ತು ರೆಡಿ ಇದೆ. ಹಣ ಬೇಕೆಂದರೆ ತಕ್ಷಣವೇ ಬಿಡುಗಡೆ ಮಾಡುತ್ತೇವೆ.

ಅಧ್ಯಕ್ಷರು : ಅವರು ಅದನ್ನು ಗದಗ್‌ಗೆ ಮಾಡಬಾರದೆಂದು ಹೇಳುತ್ತಿದ್ದಾರೆ.

ಶ್ರೀ ಕರುಣಾಕರ ರೆಡ್ಡಿ ; ಸನ್ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಗೆ ಅಕ್ವೈರ್ ಆಗಿದೆ. ಹಣ ಬೇಕೆಂದರೆ ಇವತ್ತೇ ಕಳುಹಿಸುತ್ತೇವೆ. ಅದರಲ್ಲಿ ಬೇರೆ ತೊಂದರೆ ಇಲ್ಲ.

ಶ್ರೀ ಸಿದ್ದರಾಮಯ್ಯ ; ಅಲ್ಲಿ 50% ಹೆಚ್ಚು ಸರ್ಕಾರದ ಜಾಗವಿದೆ.

ಅಧ್ಯಕ್ಷರು : ಇಲ್ಲ. ಆ ರೀತಿ ಇಲ್ಲ. ನಾನು ಕಂದಾಯ ಮಂತ್ರಿಯಾಗಿದ್ದಾಗ

ಒಂದು ಸಭೆಯನ್ನು ಕರೆದಿದ್ದೆ. ಇಲ್ಲಿ ಚರ್ಚೆಯೂ ಆಯಿತು. ಏನಾಗಿದೆ ಎಂದರೆ. ಕೆಲವು ಜಮೀನುಗಳ ಬಗ್ಗೆ ವಿವಾದಗಳು ಬಂದವು. ಕೆಲವು ಜಮೀನನ್ನು ಅಧಿಕಾರಿಗಳೇನು ಆಯ್ಕೆ ಮಾಡಿದ್ದರೋ ಅದು ಸರಿಯಲ್ಲ. ಮತ್ತೊಂದು ಜಮೀನನ್ನು ತೆಗೆದುಕೊಳ್ಳಿ ಎಂದು ಜನಪ್ರತಿನಿಧಿಗಳು ಹೇಳಿದರು. ಇವೆಲ್ಲಾ ಸ್ವಲ್ಪ ಸಮಸ್ಯೆಯಾಯಿತು. ಸರ್ಕಾರಿ ಜಮೀನು ಇದ್ದದ್ದಕ್ಕೇನು ಸಮಸ್ಯೆ ಇಲ್ಲ.

ಶ್ರೀ ಸಿದ್ದರಾಮಯ್ಯ ; ಈಗಾಗಲೇ 3 ವರ್ಷ ಆಗಿ ಹೋಗಿದೆ. ಆಯಿತು. ಈಗ ಅಲ್ಲಿ ಎಷ್ಟು ಎಕರೆ ಪ್ರಪೋಸ್ ಮಾಡಿದ್ದಾರೆ. ಯಾವ್ಯಾವುವು ಯಾವ್ಯಾವ ಪರಿಸ್ಥಿತಿಯಲ್ಲಿದೆ. ವಿವಾದವಿರುವ ಎಷ್ಟು ಎಕರೆ ಜಮೀನಿವೆ. ಒಪ್ಪಿಗೆಯಾಗಿರುವ ಜಮೀನು ಎಷ್ಟು ಇದೆ. ಅಧಿಕಾರಿಗಳು ಮತ್ತು ರೈತರ ನಡುವೆ ಪರಿಹಾರದ ಬಗ್ಗೆ ಏನು ಚರ್ಚೆಯಾಗಿದೆ. ಯಾವ ಪರಿಸ್ಥಿತಿಯಲ್ಲಿದೆ ಹೇಳಿ ನೋಡೋಣ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ; ತಾವು ಪ್ಲಾನ್ ಕಲಂ ಓದಿ. " 8 ಕೋಟಿ 64 ಲಕ್ಷ ಈ ಹಣವು ವಿವಿಧ ಹಂತಗಳಲ್ಲಿರುವ ಭೂಸ್ವಾಧೀನ ಪ್ರಕರಣಗಳಿಗೆ ಭೂ ಸ್ವಾಧೀನ ನಿಯಮಗಳ ಅನುಸಾರ ಕಮಿಟ್‌ಮೆಂಟ್ ಅಗಿರುವುದರಿಂದ ಸದರಿ ಹಣವನ್ನು ಮರಳಿ ಪಡೆಯಬಾರದೆಂದು ಕೋರುತ್ತೇನೆ ಎಂದು ಬೆಳಗಾಂ ಜಿಲ್ಲಾಧಿಕಾರಿಗಳು ಪತ್ರವನ್ನು ಬರೆದಿದ್ದಾರೆ. ನೀವು ಭೂಸ್ವಾಧೀನವಾಗಿಲ್ಲವೆನ್ನುತ್ತೀರಿ. ಈಗ ಭೂಸ್ವಾಧೀನ ಪ್ರಕ್ರಿಯೆ ಈಗ ಮುಗಿಯುವ ಹಂತಕ್ಕೆ ಬಂದಿದೆ. ಈಗ ಮುಗಿಯುವ ಹಂತಕ್ಕೆ ಬಂದಾಗ ರೈತರೆಲ್ಲಾ ಕೊಡುವುದಕ್ಕೆ ತಯಾರಿದ್ದಾರೆ. ಈಗ ಹಣವನ್ನು ಕಿತ್ತುಕೊಂಡರೆ ಹೇಗೆ?

ಅಧ್ಯಕ್ಷರು : ಹುಕ್ಕೇರಿಯವರೆ, ನಿಮ್ಮ ಕಳಕಳಿ ಏನಿದೆ ಎಂದರೆ ಹಣ ಎಲ್ಲಿಯೂ ಹೋಗಬಾರದು. ಹಣ ಕೊಡಬೇಕೆಂಬುದು.

ಶ್ರೀ ಕರುಣಾಕರ ರೆಡ್ಡಿ ; ನಾನು ಬೆಳಗಾಂ ವಿಭಾಗದ ಎಲ್ಲಾ ಡಿಸಿ. ತಹಶೀಲ್ದಾರ್ ಗಳನ್ನು ಕರೆದು ರೀವ್ಯೂ ಮಾಡಿದ್ದೇನೆ. ಇವತ್ತು ಕೂಡ ಇದನ್ನ ಅತೀ ಬೇಗ ಮಾಡಬೇಕೆಂದು ಅವರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಆದರೆ ಸನ್ಮಾನ್ಯ ಸದಸ್ಯರು ಹೇಳಿದಂತೆ ಪ್ರಕ್ರಿಯೆ ಮುಗಿಯುವ ಹಂತಕ್ಕೆ ಬಂದಿದೆ ಎಂದು ಹೇಳುವುದು ಸರಿಯಲ್ಲ. ಬೇಗ ಮಾಡಬೇಕು. ನಿಮಗೆ ಯಾವಾಗ ಬೇಕಾದರೂ ಹಣ ಕೊಡಲು ತಯಾರಿದ್ದೇವೆಂದು ಅವರಿಗೆ ನಾನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ ; ಮಾನ್ಯ ಸದಸ್ಯರು ಅವರು ಎರಡು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಒಂದು. ಡಿಸಿ ಹಣ ತೆಗೆದುಕೊಳ್ಳಬೇಡಿ ಎಂದರೂ ಹಣ

ತೆಗೆದುಕೊಂಡುಬಿಟ್ಟಿದ್ದೀರಿ. ಸ್ವಾಧೀನ ಪ್ರಕ್ರಿಯೆ ವಿವಿಧ ಹಂತಗಳಲ್ಲಿದೆ. ಹಣ ನಮಗೆ ಬೇಕೇ ಬೇಕು ತೆಗೆದುಕೊಳ್ಳಬೇಡಿ ಎಂದು ಹೇಳಿದ್ದಾರೆ. ಆದರೂ ಕೂಡ ತೆಗೆದುಕೊಂಡಿದ್ದೀರಿ. ನೀವು ತೆಗೆದುಕೊಂಡಿಲ್ಲ. President Rule ಇರುವಾಗ ತೆಗೆದುಕೊಂಡಿದ್ದಾರೆ. ಅದಾದ ಮೇಲೆ ನೀವು ದುಡ್ಡು ಬಿಡುಗಡೆ ಮಾಡಿ ಅಂದ ತಕ್ಷಣ ಇನ್ನು ದುಡ್ಡು ಬಿಡುಗಡೆ ಮಾಡಲಿಲ್ಲ. ಇದು ಒಂದು. ಎರಡನೆಯದು. ಅಲ್ಲಿ ಎಷ್ಟು ಎಕರೆ ಬೇಕು ಅಷ್ಟು ಎಕರೆಯಲ್ಲಿ ಸರ್ಕಾರದ ಜಮೀನು ಅಲ್ಲಿ ಇದೆಯೋ ಇಲ್ಲವೋ ಖಾಸಗಿ ಜಮೀನು ತೆಗೆದುಕೊಳ್ಳಬೇಕಾದರೆ ಸೆಕ್ಷನ್ 4ರ ಪ್ರಕಾರ issue ಆಗಿದೆಯೋ ಇಲ್ಲವೋ. ಅವಾರ್ಡ ಕೊಡತಕ್ಕಂತಹ position ಗೆ ಬಂದಿದೆಯೋ ಇಲ್ಲವೋ? ಯಾವ ಹಂತದಲ್ಲಿ ಇದೆ ಎಂದು ಸ್ವಲ್ಪ ಹೇಳಿ ನೋಡೋಣ.

ಶ್ರೀ ಪ್ರಕಾಶ್ ಹುಕ್ಕೇರಿ ಬಿ : ಮಾನ್ಯ ಅಧ್ಯಕ್ಷರೆ. ದುಡ್ಡು ಬಿಡುಗಡೆ ಆಗಿದ್ದು ಇನ್ನು PD Account ನಲ್ಲಿದೆ. ಅದನ್ನು withdraw ಮಾಡಬಾರದು ಎಂದು ಹೇಳುತ್ತಿದ್ದೇವೆ. 1.04.2008 ರಂದು ಜಿಲ್ಲಾಧಿಕಾರಿಗಳು ಬರೆದಿರುವಂತಹ ಪತ್ರವನ್ನು ಓದಿ ತೋರಿಸಿದ್ದೇನೆ. ಈ ಪತ್ರವನ್ನು ತಾವು ಸುಳ್ಳು ಎಂದು ಹೇಳುತ್ತಿರಾ?

ಶ್ರೀ ಕರುಣಾಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ. ಆ ಹಣ ಇನ್ನು withdraw ಆಗಿಲ್ಲ. ಅಲ್ಲಿಯೇ ಇದೆ ಎಂದರೆ ಅಲ್ಲಿಯೇ ಉಳಿಸಿಕೊಡುತ್ತೇವೆ. ಬೆಳಗಾಂ ಹಿತವನ್ನು ನಾವು ಖಂಡಿತವಾಗಿ safeguard ಮಾಡುತ್ತೇವೆ. ಅಲ್ಲಿ ಏನು ಹಣ ಬೇಕು ಅದನ್ನು ಕೊಡುತ್ತೇವೆಂದು ಹೇಳುತ್ತಿದ್ದೇವೆ. ಆ ಹಣ ಡಿ.ಸಿ. ಆಫೀಸ್‌ನಲ್ಲಿ ಅಲ್ಲಿಯೇ ಇದ್ದರೆ ಅಲ್ಲಿಯೇ ಉಳಿಸಿ ಕೊಡುತ್ತೇವೆ.

ಅಧ್ಯಕ್ಷರು : ಒಂದು ಆರ್ಡರ್ ಮಾಡಿಬಿಡಿ.

ಶ್ರೀ ದೊಡ್ಡನಗೌಡ ಜಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಬಾಗಲಕೋಟೆ ಜಿಲ್ಲೆ ಬಗ್ಗೆ ಹೇಳುತ್ತಿದ್ದೇನೆ. ಮಲಪ್ರಭಾ ನದಿ ಮತ್ತು ಕೃಷ್ಣ ನದಿಯಿಂದ ಆಗಿರುವಂತಹ ಸುಮಾರು 20 ಕ್ಕೂ ಹೆಚ್ಚು ಗ್ರಾಮಗಳು ಅದೇ ಪರಿಸ್ಥಿತಿಯಲ್ಲಿವೆ.

ಅಧ್ಯಕ್ಷರು : ಸಪರೇಟಾಗಿ ಕೇಳಿ ತಕ್ಷಣ ಮಾಹಿತಿ ಕೊಡಿ ಎಂದರೆ ಅವರು ಹೇಗೆ ಕೊಡುತ್ತಾರೆ. ನೀವು ಸಪರೇಟ್ ನೋಟಿಸ್ ಕೊಡಿ.

6 ವಿತ್ತೀಯ ಕಾರ್ಯಕಲಾಪ

2008–2009ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ ಹಾಗೂ 1 ರಿಂದ 28 ರವರೆಗಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ.